
ಪುಟ ಬಂಗಾರ

# ಲಂಕೇಶ್ ಕೆಲವು ಅನಿಸಿಕೆಗಳು



1957 ಎಂದು ತೋರುತ್ತದೆ, ಬೆಂಗಳೂರು ಆಕಾಶವಾಣಿಯವರು ವಿ.ಸೀ.ಯವರ ಅಧ್ಯಕ್ಷತೆಯಲ್ಲಿ ಸಾಹಿತ್ಯ ಪರಿಷತ್ತಿನಲ್ಲಿ ಸಭಾಂಗಣದಲ್ಲಿ ಕವಿ ಸಮ್ಮೇಳನವೊಂದನ್ನು ಏರ್ಪಡಿಸಿದ್ದರು. ನಾನೂ ಶಿವರುದ್ರಪ್ಪನವರೂ ಅದರಲ್ಲಿ ಭಾಗವಹಿಸಿದ್ದೆವು. ಲಂಕೇಶ ಬಹುಶಃ ಆ ಸಭೆಗೆ ಬಂದಿರಬೇಕು. ಆಮೇಲೆ ಶಿವರುದ್ರಪ್ಪನವರು ಅವರು ವಾಸಿಸುತ್ತಿದ್ದ ಕೋಣೆಗೆ ನನ್ನನ್ನು ಕರೆದುಕೊಂಡು ಹೋದರು. ಸುಮತೀಂದ್ರ ನಾಡಿಗರೂ ಲಂಕೇಶರ ಜೊತೆಗಿದ್ದು ಕಾಲೇಜಿನಲ್ಲಿ ಅಭ್ಯಾಸ ಮಾಡುತ್ತಿದ್ದರು. ಲಂಕೇಶ ಈ ಮೊದಲು ಶಿವಮೊಗ್ಗೆಯಲ್ಲಿ ಶಿವರುದ್ರಪ್ಪನವರ ವಿದ್ಯಾರ್ಥಿಯಾಗಿದ್ದುದರಿಂದ ತುಂಬ ಸಲಿಗೆಯಿಂದ, ತಮಾಷೆಯಾಗಿ ಅವರೊಡನೆ ಮಾತುಕತೆಯಾಡಿದ ನೆನಪು. ಸಮೀಪದ ಹೋಟಲಿನಿಂದ ಅವರ ಕರ್ನಾಟಕ ಸಂಘ ಪ್ರಕಟಿಸಿದ ಒಂದು ಚಿಕ್ಕ ಪುಸ್ತಕವನ್ನು ನನಗೆ ಕೊಟ್ಟರು. ಅದರ ಹೆಸರು ಮರೆತಿದೆ. ಅದರಲ್ಲಿ ಲಂಕೇಶ ಹಾಗೂ ನಾಡಿಗರ ಕವಿತೆಗಳೂ ಇದ್ದವು. ಅಂದಿನ ಮಾತುಕತೆಯಲ್ಲಿ ಅವರಿಬ್ಬರಲ್ಲಿ ಯಾರು ಹೆಚ್ಚು ತುಂಟತನವನ್ನು ವ್ಯಕ್ತಪಡಿಸಿದರೆಂಬುದು ನೆನಪಿಲ್ಲ. ಆ ಅಲ್ಪ ಸಮಯದಲ್ಲಿಯೇ ಹಳ್ಳಿಯ ಹುಡುಗನ ವಿಶಿಷ್ಟ ಲಕ್ಷಣಗಳೆಲ್ಲ ಲಂಕೇಶರಲ್ಲಿ ನನಗೆ ಕಂಡುಬಂದವು. ಹಳ್ಳಿಯಿಂದಲೇ ಬಂದಿರುವ ನನಗೆ ಅವರ ಬಗ್ಗೆ ಪ್ರೀತಿಯುಂಟಾಗಲು ಇದೂ ಒಂದು ಕಾರಣವಾಗಿರಬೇಕು.

ಮುಂದೆ ಕೆಲವು ವರ್ಷ ಲಂಕೇಶರನ್ನು ಕಾಣುವ ಸಂದರ್ಭ ಬಂದಿರದಿದ್ದರೂ ಅವರ ಕವಿತೆ, ಕಥೆ, ಕಾದಂಬರಿ, ನಾಟಕಗಳು ಒಂದರ ಹಿಂದೊಂದು ಪ್ರಕಟವಾಗಿ ಅವರ ಸಾಹಿತ್ಯಿಕ ಬೆಳವಣಿಗೆ ನನ್ನಲ್ಲಿ ಸಹಜವಾಗಿಯೇ ಕುತೂಹಲವನ್ನು ಹುಟ್ಟಿಸಿತು. ಆ ಕಾಲದ ನವ್ಯ ಲೇಖಕರಲ್ಲಿಯೇ ಅತ್ಯಂತ